ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 28-03-2017

## ಪತ್ರಿಕಾ ಆಮಂತ್ರಣ

**1. ಅನ್ನಭಾಗ್ಯ ಯೋಜನೆಯಡಿ ಈಗಿರುವ 5 ಕೆ.ಜಿ ಬದಲಿಗೆ 7 ಕೆ.ಜಿ ಅಕ್ಕಿ ವಿತರಣೆ ಮಾಡುವ ಯೋಜನೆ ಉದ್ಘಾಟನೆ:**

**ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.**
**ಮುಖ್ಯ ಅತಿಥಿಗಳು:**
**ಸಚಿವ ಸಂಪುಟ ಸದಸ್ಯರು, ಶಾಸಕರು ಮತ್ತು ಗಣ್ಯ ವ್ಯಕ್ತಿಗಳು.**

**ದಿನಾಂಕ: 30-03-2017, ಗುರುವಾರ, ಸಮಯ: ಸಂಜೆ 4.00 ಗಂಟೆಗೆ.**

**ಸ್ಥಳ: ಫ್ರೀಡಂ ಪಾರ್ಕ್, ಬೆಂಗಳೂರು.**

# ಪತ್ರಿಕಾ ಪ್ರಕಟಣೆ

## ನಿಮ್ಮ ಬದುಕನ್ನು ನೀವೇ ಕಟ್ಟಿಕೊಂಡು ಇತರರಿಗೆ ಮಾದರಿಯಾಗಿ

## –ಸಚಿವ ಆಂಜನೇಯ

ಬೆಂಗಳೂರು, ಮಾರ್ಚ್ 28 (ಕರ್ನಾಟಕ ವಾರ್ತೆ)–

ಹಿಂದಿನ ಕಾಲದಲ್ಲಿ ಪತ್ರಿಕೋದ್ಯಮ ಕ್ಷೇತ್ರ ಕೇವಲ ಕೆಲವೇ ವರ್ಗಗಳಿಗೆ ಮೀಸಲಾಗಿತ್ತು, ಇಂದು ಕಾಲ ಬದಲಾಗಿದ್ದು ಪತ್ರಿಕೋದ್ಯಮದಲ್ಲಿ ಎಲ್ಲಾ ವರ್ಗದ ಜನರು ಇದ್ದಾರೆ, ನಿಮ್ಮ ಬದುಕನ್ನು ನೀವೇ ಕಟ್ಟಿಕೊಂಡು ಇತರರಿಗೆ ಮಾದರಿಯಾಗಿ ಬೆಳೆಯಬೇಕು ಎಂದು ಸಚಿವ ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ ಅವರು ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಏರ್ಪಡಿಸಿದ್ದ ಪರಿಶಿಷ್ಟ ಜಾತಿ/ಪಂಗಡ ಹಾಗೂ ಹಿಂದುಳಿದ ವರ್ಗಗಳ ಪತ್ರಿಕೋದ್ಯಮ ಪದವೀಧರರಿಗೆ ವೃತ್ತಿ, ನಿರೂಪಣಾ ಕೌಶಲ್ಯ ತರಬೇತಿ ಯೋಜನೆಯ ಫಲಾನುಭವಿಗಳಿಗೆ ಲ್ಯಾಪ್‌ಟ್ಯಾಪ್ ವಿತರಣೆ ಮಾಡಿ ಮಾತನಾಡಿ ಪತ್ರಿಕೋದ್ಯಮದಲ್ಲಿ ಇಂದು ಪ್ರತಿಭೆಗೆ ಹೆಚ್ಚಿನ ಬೆಲೆ ಇದ್ದು ಅವಕಾಶಗಳನ್ನು ಬಳಸಿಕೊಂಡು ಬೆಳೆಯಿರಿ, ನಾನು ಒಂದು ಪತ್ರಿಕೆಯ ಸಂಪಾದಕ ಹಾಗೂ ಪ್ರಕಾಶಕನಾಗಿದ್ದೆ, ನಾನು ಪತ್ರಿಕೋದ್ಯಮದಲ್ಲಿ ಇದ್ದಾಗ ಅನೇಕ ಹಿರಿಯ ಪತ್ರಕರ್ತರ ಒಡನಾಟವಿತ್ತು ಎಂದು ಸ್ಮರಿಸಿಕೊಂಡರು.

ಬಡ ವಿದ್ಯಾರ್ಥಿಗಳಿಗೆ ಲ್ಯಾಪ್‌ಟ್ಯಾಪ್ ಎನ್ನುವುದು ಗಗನ ಕುಸುಮವಾಗಿತ್ತು, ಅವರ ಆಸೆಗಳನ್ನು ಈಡೇರಿಸಲು ಸರ್ಕಾರ ಶ್ರಮಿಸುತ್ತಿದೆ. ಇಂದಿನ ಕಂಪ್ಯೂಟರ್ ಯುಗದಲ್ಲಿ ಇಂಟರನೆಟ್ ಬಳಸಿಕೊಳ್ಳುವ ಮೂಲಕ ಜ್ಞಾನವನ್ನು ವೃದ್ಧಿಸಿಕೊಳ್ಳಿ ಎಂದು ಹೇಳಿದ್ದರು.

ತರಬೇತಿ ನಿರ್ದೇಶಕ ಹಿರಿಯ ಪತ್ರಕರ್ತ ಈಶ್ವರ ದೈತೋಟ ಅವರು ಮಾತನಾಡಿ ಲಕ್ಷಾಂತರ ಕೋಟಿ ರೂಪಾಯಿಗಳ ವ್ಯವಹಾರವಾಗಿ ಬೆಳೆದಿರುವ ಪತ್ರಿಕೋದ್ಯಮದಲ್ಲಿ ಪತ್ರಕರ್ತ ಎಂಬುದರ ಜೊತೆಯಲ್ಲಿ ಅನೇಕ ಹೊಸ ಅವಕಾಶಗಳು ಸೃಷ್ಟಿಯಾಗುತ್ತಿವೆ. ತಾಂತ್ರಿಕತೆ ಬೆಳೆದಂತೆ ಹಲವು ಹೊಸ ಹುದ್ದೆಗಳು ಸೃಷ್ಟಿಯಾಗುತ್ತಿದ್ದು ಈ ಸಮಯದಲ್ಲಿ ವಿದ್ಯಾರ್ಥಿಗಳು ಭಾಷೆ ಮೇಲಿನ ಹಿಡಿತ ಮತ್ತು ಕಂಪ್ಯೂಟರ್ ಜ್ಞಾನ ಬೆಳಸಿಕೊಳ್ಳುವುದರ ಮೂಲಕ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದು ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್.ಆರ್.ವಿಶುಕುಮಾರ್ ಅವರು ಮಾತನಾಡಿ ಹೊಸದಾಗಿ ಪದವಿ ಪಡೆದ ಯುವಕರು ಸಣ್ಣ ಉದ್ಯೋಗವೆಂದು ತಾತ್ಸಾರ ಮಾಡದೇ ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ಬೆಳೆಯಬೇಕು. ಚಿಕ್ಕ ಅವಕಾಶಗಳು ಮುಂದೊಂದು ದಿನ ದೊಡ್ಡ ಅವಕಾಶಗಳಿಗೆ ಅನುಭವ ನೀಡುತ್ತವೆ. ಯುವಕರು ಬೆಳೆಯುವ ಜೊತೆ ಜೊತೆಯಲ್ಲಿ ಸಮಾಜಿಕ ಜವಬ್ಧಾರಿಯನ್ನು ಸಹ ಬೆಳಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಜಂಟಿ ನಿರ್ದೇಶಕ ರವಿಕುಮಾರ್, ಪ್ರಾದೇಶಿಕ ಸಹಕಾರ ಸಂಸ್ಥೆ ನಿರ್ದೇಶಕ ವಸಂತನಾಯ್ಕ ಅವರು ಅಭ್ಯರ್ಥಿಗಳಿಗೆ ಶುಭಕೋರಿದರು. ಉಪ ನಿರ್ದೇಶಕ ಎ.ಆರ್. ಪ್ರಕಾಶ್ ಸ್ವಾಗತಿಸಿ, ವಂದಿಸಿದರು.

## ನಿವೃತ್ತಿ ವಯಸ್ಸು 58 ರಿಂದ 60 ಕ್ಕೆ ಏರಿಕೆ

ಬೆಂಗಳೂರು, ಮಾರ್ಚ್ 28 (ಕರ್ನಾಟಕ ವಾರ್ತೆ)–

ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶಗಳು) ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ರಾಜ್ಯ ಸರ್ಕಾರವು ಕಾರ್ಮಿಕರ ನಿವೃತ್ತಿ ವಯಸ್ಸನ್ನು 58 ರಿಂದ 60 ವರ್ಷಗಳಿಗೆ ಹೆಚ್ಚಿಸಲಾಗಿದೆ. ಈ ಕುರಿತು ಮಾರ್ಚ್ 27 ರಂದು ಸರ್ಕಾರವು ಅಧಿಸೂಚನೆ ಹೊರಡಿಸಿದೆ.

# ಯುಗಾದಿ ಹಬ್ಬದ ಶುಭಾಶಯ

ಬೆಂಗಳೂರು, ಮಾರ್ಚ್ 28 (ಕರ್ನಾಟಕ ವಾರ್ತೆ)–

ಕರ್ನಾಟಕ ಸರ್ಕಾರದ ನವದೆಹಲಿ ವಿಶೇಷ ಪ್ರತಿನಿಧಿ ಅಪ್ಪಾಜಿ ಸಿ.ಎಸ್. ನಾಡಗೌಡ ಅವರು ನಾಡಿನ ಸಮಸ್ತ ಜನತೆಗೆ ಶುಭ ಕೋರಿದ್ದಾರೆ.

ಹೊಸ ವರ್ಷವು ನಾಡಿನ ಸಮಸ್ತ ಜನರಿಗೂ ನವೋಲ್ಲಾಸ, ನವಚೇತನ ಸಿರಿ ಸಂಪತ್ತನ್ನು ಕೊಟ್ಟು ಸಕಲ ಕಾರ್ಯಗಳಲ್ಲಿ ಯಶಸ್ಸು ಲಭಿಸಲೆಂದು ಅವರು ಆಶಿಸಿದ್ದಾರೆ.